ದಿಃ26.08.2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ತಕರಾರುದಾರರಾದ ನಂ 1 ಪರ ವಕೀಲರಾದ ಶ್ರೀ ಎಸ್.ಕೆ ಇವರಿಂದ ಪಾಟೀ ಸವಾಲುಃ

ನಾನು ಸಲ್ಲಿಸಿದ ಪ್ರಮಾಣ ಪತ್ರ ಸಲ್ಲಿಸಲು ಯಾರು ಮಾಹಿತಿ ಕೊಟ್ಟಿಲ್ಲ. ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ಹೇಳಲು ಆಗುವುದಿಲ್ಲ. ಆದರೆ ಸೈಟಿನ ಕುರಿತು ಅದರಲ್ಲಿ ಹೇಳಲಾಗಿದೆ. ನನ್ನ ಸೈಟಿನ ನಂಬರು ಮತ್ತು ಅದರ ಅಸ್ಸೆಸ್‌ಮೆಂಟ್ ನಂಬರು ಹೇಳಲು ಬರುವುದಿಲ್ಲ. ಸೈಟ್ ಇದು ನನ್ನ ಪಿತ್ರಾರ್ಜಿತ ಸ್ವತ್ತು ಇರುವ ಕುರಿತು ನ್ಯಾಯಾಲಯಕ್ಕೆ ನಾನು ದಾಖಲಾತಿಗಳನ್ನು ಒದಗಿಸಿರುತ್ತೇನೆ. ನಾನು ಸಲ್ಲಿಸಿದ ದಾಖಲಾತಿಗಳನ್ನು ನೋಡುತ್ತಿದ್ದೇನೆ. ಅವುಗಳ ಪೈಕಿ ದಾವಾ ಸೈಟು ಪಿತ್ರಾರ್ಜಿತ ಸ್ವತ್ತಾಗಿದೆ ಎಂದು ತೋರಿಸುವ ದಾಖಲೆ ಯಾವುದು ನನಗೆ ಗೊತ್ತಾಗುವುದಿಲ್ಲ. ನನ್ನ ಮತ್ತು ತಕರಾರುದಾರನಾದ ಎಮ್.ಜಿ ಜಾವೇದ್ ಇಬ್ಬರ ನಡುವೆ ತಕರಾರಿನಲ್ಲಿ ಇರುವ ಸೈಟು ನನ್ನ ಪಿತ್ರಾರ್ಜಿತ ಸೈಟು ಆಗಿರುವುದಿಲ್ಲ ಅಂದರೆ ಸುಳ್ಳು. ನಮ್ಮಿಬ್ಬರ ತಕರಾರಿನಲ್ಲಿರುವ ಸೈಟು ಪುರಸಬೆ ಸೈಟು ಅಂದರೆ ಸುಳ್ಳು. ಮೂಲತಃ ಆ ಸೈಟು ಪುರಸಬೆಯವರಿಗೆ ಸೇರಿತ್ತು. ಅದನ್ನು ಅವರು ಬೀರಪ್ಪ ತಂದೆ ಸಿದ್ದಪ್ಪ ಕಣ್ಣವರ್ ಇವರಿಗೆ ಮಾಡಿಕೊಟ್ಟರು ಅಂದರೆ ಸರಿ. ನಂತರದಲ್ಲಿ ಸದರಿ ಬೀರಪ್ಪ ಇವರು ಆ ಸೈಟಿನ ಮಾಲೀಕರು ಆದರು ಅಂದರೆ ಸರಿ. ನಂತರದಲ್ಲಿ ಮೇಲ್ಕಂಡ ಬೀರಪ್ಪ ಮತ್ತು ಆತನ ಸಹೋದರರು ದಿಃ22.08.1974ರಲ್ಲಿ ಪಾಲು ವಿಭಾಗ ಮಾಡಿಕೊಂಡು ಅಂದರೆ ಸರಿ. ಪಾಲು ವಿಭಾಗ ಪತ್ರದ ಆದಾರದ ಮೇಲಿಂದ ಮೇಲ್ಕಂಡ ಸ್ವತ್ತು ಬೀರಪ್ಪ ಇವರ ಹೆಸರಿಗೆ ಬಂದ ನಂತರ ಪುರಸಬೆ ಹರಿಹರದ ಕಾರ್ಯಾಲಯದಲ್ಲಿ ಸಂಬಂಧಪಟ್ಟ ಸ್ವತ್ತಿಗೆ ಅವರ ಹೆಸರು ದಾಖಲಾಯಿತು ಅಂದರೆ ಸರಿ. ದಿಃ23.06.1995ರಂದು ಬೀರಪ್ಪ ಇತನು ಸದರಿ ಸೈಟ್‌ನ್ನು ಅನಂತರಾಜ್ ಪಾಟೀಲ್ ಇತನಿಗೆ ಮಾರಾಟ ಮಾಡಿರುತ್ತಾನೆ ಅಂದರೆ ಸರಿ. ಆ ಪ್ರಕಾರವಾಗಿ ಆ ಸೈಟಿಗೆ ಅನಂತರಾಜ್ ಪಾಟೀಲ್ ಇವರು ಮಾಲೀಕರು ಆದರು ಅಂದರೆ ಸರಿ. ನಂತರದಲ್ಲಿ ಅವರು ಸದರಿ ಸ್ವತ್ತನ್ನು ದಿಃ23.09.1995ರಂದು ಹರಿಹರೇಶ್ವರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಹರಿಹರ ಇವರಿಗೆ ಅಡಮಾನ ಮಾಡಿ ಸಾಲ ತೆಗೆದುಕೊಂಡಿರುತ್ತಾರೆ ಅನ್ನುವುದು ನನಗೆ ಗೊತ್ತಿಲ್ಲ. ದಿಃ28.03.1996ರಂದು ಅನಂತರಾಜ್ ಪಾಟೀಲ್

ಇವರು ಸಾಲವನ್ನು ತೀರಿಸಿ ಸೈಟಿಗೆ ಸಂಬಂಧಪಟ್ಟ ದಾಖಲೆಗಳನ್ನು ಆಧಾರ ತಿಳುವಳಿ ಪತ್ರದ ಮುಖಾಂತರ ತಮ್ಮ ಹೆಸರಿನಲ್ಲಿ ನೊಂದಾವಣಿ ಮಾಡಿಕೊಂಡಿರುತ್ತಾರೆ ಅನ್ನುವುದು ಗೊತ್ತಿಲ್ಲ. ನಂತರದಲ್ಲಿ ಅನಂತರಾಜ್ ಪಾಟೀಲ್ ಇವರು ದಿ:28.03.1996ರಂದು ಮೇಲಿನ ಸೈಟ್‌ನ್ನು ಈ ಪ್ರಕರಣದಲ್ಲಿ ಇರುವ ತಕರಾರುದಾರನಾದ ಎಮ್.ಜಿ.ಜಾವೇದ್ ಇತನಿಗೆ 53 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿ. ಸಾಕ್ಷಿದಾರರು ಮುಂದುವರೆದು ಹೇಳುವುದು ಏನೆಂದರೆ ನಾನು ಕೋರ್ಟ್‌ಗೆ ದಾವೆ ಹಾಕಿದ ನಂತರ ಅದನ್ನು ಮಾರಾಟ ಮಾಡಿರುತ್ತಾರೆ. ದಿ:28.03.1996ರಿಂದ ಇದು ಇದುವರೆಗೆ ತಕರಾರುದಾರನಾದ ಎಮ್.ಜಿ ಜಾವೇದ್ ಇತನು ಸೈಟಿನ ಸ್ವಾದೀನ ಅನುಭವದಲ್ಲಿರುತ್ತಾನೆ ಅಂದರೆ ಸುಳ್ಳು. ನಂತರದಲ್ಲಿ ಎಮ್.ಜಿ. ಜಾವೇದ್ ಇತನ ಹೆಸರಿನಲ್ಲಿ ಪುರಸಬೆ ದಾಖಲಾತಿಗಳಲ್ಲಿ ಖಾತೆ ಬದಲಾವಣೆ ಆಗಿದೆ ಅಂದರೆ ಸರಿ. ಮೇಲ್ಕಂಡ ತಕರಾರುದಾರ ತಾವು ಖರೀದಿ ತೆಗೆದುಕೊಂಡಾಗಿನಿಂದಲೂ ಸೈಟ್ ವಿಸ್ತೀರ್ಣ 40X60 ಅಡಿ ಆತನ ಸ್ವಾದೀನ ಅನುಭವದಲ್ಲಿದೆ ಅಂದರೆ ಸರಿ.

2. ಮೇಲ್ಕಂಡ ತಕರಾರುದಾರ ದಾವಾ ಸೈಟಿನಲ್ಲಿ ಮನೆ ಕಟ್ಟುವ ಸಲುವಾಗಿ ದಿ:02.01.1999ರಂದು ಲೈಸನ್ಸ್ ಪಡೆಯಲು ಅರ್ಜಿ ಸಲ್ಲಿಸಿ ಕಟ್ಟಡ ಪರವಾನಿಗೆ ಪಡಕೊಂಡಿರುತ್ತಾನೆ ಅಂದರೆ ಸುಳ್ಳು. ದಿ:02.01.1999ರಂದು ಲೈಸನ್ಸ್ ಪಡೆದುಕೊಂಡ ನಂತರ ತಕಾರಾರುದಾರನು ಸೈಟಿನಲ್ಲಿ ಸುತ್ತಮುತ್ತ 1 ವರೆ ಅಡಿ ಜಾಗೆ ಬಿಟ್ಟು ಪೌಂಡೇಷನ್ ಹಾಕಿಕೊಂಡಿರುತ್ತಾನೆ ಅಂದರೆ ಸರಿ. ನಂತರದಲ್ಲಿ ಆತ ಕೇವಲ 19x30 ಅಡಿ ಜಾಗೆಯಲ್ಲಿ ಆರ್.ಸಿ.ಸಿ ಮನೆ ಕಟ್ಟಿಸಿಕೊಂಡು ಉಳಿದ ಕಟ್ಟದೇ ಇರುವ ಜಾಗೆ ಆತನ ಸ್ವಾದೀನ ಅನುಭವದಲ್ಲಿದ್ದು ಅನುಭವಿಸುತ್ತಾ ಬಂದಿರುತ್ತಾನೆಂದರೆ ಸುಳ್ಳು.

3. ನಾನು ಅಸಲು ದಾವಾ ನಂ 77/95ನ್ನು ಸಲ್ಲಿಸಿದ್ದೆ ಅಂದರೆ ಸರಿ. ಆ ಸಮಯದಲ್ಲಿ ಪ್ರಸ್ತುತ ತಕರಾರುದಾರನಾದ ಎಮ್.ಜಿ ಜಾವೇದ್ ಇತನಿಗೆ ನೋಟಿಸು ನೀಡಲಾಗಿತ್ತು. ಆತನಿಗೆ ನಮ್ಮ ವಕೀಲರಾದ ಶ್ರೀ ಬಿ.ಎಚ್ ಇವರಿಂದ ನೋಟಿಸು ಕೊಡಲಾಗಿತ್ತು. ಅದರ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ. ಆ ನೋಟಿಸಿನಲ್ಲಿ ಉಲ್ಲೇಖಿಸಿದ ವಿಷಯ ನನಗೆ ಗೊತ್ತಿಲ್ಲ. ಆ ನೋಟಿಸಿನ ಪ್ರತಿಯನ್ನು ಇದರಲ್ಲಿ ಹಾಜರು ಪಡಿಸಲಾಗಿದೆ. ನಾನು ಸಲ್ಲಿಸಿದ ದಾವೆಯಲ್ಲಿ ಎಮ್. ಜಿ ಜಾವೇದ್ ಇತನನ್ನು ಪ್ರತಿವಾದಿಯನ್ನಾಗಿ ಮಾಡಿ ನೋಟಿಸು ಕೊಡಲು ತೊಂದರೆ ಇರಲಿಲ್ಲ.

4. ಪ್ರಸ್ತುತ ಎಫ್.ಡಿ.ಪಿ ಅರ್ಜಿಯನ್ನು 2002ರಲ್ಲಿ ದಾಖಲು ಮಾಡಿದ್ದೇವೆ ಅಂದರೆ ಸರಿ. ಆ ಎಫ್.ಡಿ.ಪಿ ಪ್ರಕರಣದಲ್ಲಿ ತಕರಾರುನಾದ ಎಮ್.ಜಿ ಜಾವೇದ ಇತನ ಹೆಸರನ್ನು ಸೇರಿಸಿಲ್ಲ ಎಂಬುದು ಗೊತ್ತಿಲ್ಲ. 2002 ಕ್ಕಿಂತ ಪೂರ್ವದಲ್ಲಿ ಆತನಿಗೆ ಶ್ರೀ ಚೌಕೀಮಠ ವಕೀಲರ ಮುಖಾಂತರ ನೋಟಿಸನ್ನು ಕಳಿಸಲಾಗಿತ್ತು. ನೋಟಿಸಿನಲ್ಲಿ ಬರೆದ ವಿಷಯ ಗೊತ್ತಿಲ್ಲ. ಅದರ ಪ್ರತಿಯನ್ನು ಹಾಜರು ಪಡಿಸಿದ ಬಗ್ಗೆ ಗೊತ್ತಿಲ್ಲ.

5. ಪ್ರಸ್ತುತ ಇ.ಪಿ ಅರ್ಜಿಯನ್ನು ದಾಖಲು ಮಾಡುವ ಸಮಯದಲ್ಲಿ ತಕರಾರುದಾರನಾದ ಎಮ್.ಜಿ. ಜಾವೇದ ಇತನಿಗೆ ಶ್ರೀ ಬಿ.ಎಚ್ ವಕೀಲರ ಮುಖಾಂತರ ನೋಟಿಸ್ ಕಳಿಸಿದ್ದೆವು. ಆ ನೋಟಿಸಿನಲ್ಲಿ ಬರೆದ ವಿಷಯ ಗೊತ್ತಿಲ್ಲ. ಅದರ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ ಬಗ್ಗೆ ಗೊತ್ತಿಲ್ಲ.

ಈ ಸಮಯದಲ್ಲಿ ಶ್ರೀ ಎಸ್.ಕೆ ಇವರು ಮುಂದಿನ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.